# Anti Land-Grabbing Action Committee
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

No. 759, 5th Main, 8th Cross, R.T.Nagar, II Block, Bangalore 560032 Ph: 094481 20305

21/10/2014

ಇಂದ.
ಶ್ರೀ ಎ.ಟಿ.ರಾಮಸ್ವಾಮಿ. ಬೆಂಗಳೂರು.

ಗೆ.
ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು,
ಗೌರವಾನ್ವಿತ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಉಲ್ಲೇಖ: 14/10/2014ರಂದು ಇದೇ ವಿಷಯದ ಬಗ್ಗೆ ನಾನು ತಮಗೆ ಬರೆದ ಪತ್ರ.

ಸನ್ಮಾನ್ಯರೇ,

ಉಲ್ಲೇಖಿತ ಪತ್ರದೊಂದಿಗೆ ಲಗತ್ತಿಸಿದ್ದ ಮೂರು R.T.C. Form No. 16ಗಳು ಒಂದೇ ಕುಟುಂಬಕ್ಕೆ ಸೇರಿರುವುದಾಗಿ ತಿಳಿಸಲಾಗಿತ್ತು. ಈಗ ಅದು ನಿವೃತ್ತ ಪೊಲೀಸ್ ಅಧಿಕಾರಿ ಡಾ. ಎಚ್.ಟಿ. ಸಾಂಗ್ಲಿಯಾನ ಕುಟುಂಬದ್ದು ಎಂದು ದಾಖಲೆಗಳಿಂದ ತಿಳಿದುಬಂದಿದೆ. ಈ ಕುರಿತಂತೆ ಸಾರ್ವಜನಿಕ ತಾಣಗಳಲ್ಲಿ (public domain) ಲಭ್ಯವಿರುವ ಮಾಹಿತಿಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

1. ಡಾ. ಎಚ್.ಟಿ. ಸಾಂಗ್ಲಿಯಾನರವರೇ ಸ್ವತಃ 2004ರಲ್ಲಿ ಚುನಾವಣಾ ಅಧಿಕಾರಿಗೆ ಸಲ್ಲಿಸಿರುವ ಆಸ್ತಿ ವಿವರಗಳಿರುವ ಪ್ರಮಾಣ ಪತ್ರದಲ್ಲಿ (affidavit) ತಮ್ಮ ಧರ್ಮಪತ್ನಿ ಶ್ರೀಮತಿ ರತಂಗಪೊಯಿಯವರ ಹೆಸರಿನಲ್ಲಿ ಬೆಂಗಳೂರು ಉತ್ತರ(ಅಪರ) ತಾಲೂಕಿನ ಜಾಲ-2 ಹೋಬ್ಳಿಯ ಗಡೇನಹಳ್ಳಿ ಗ್ರಾಮದಲ್ಲಿ 2 ಎಕರೆ ಭೂಮಿ ಇರುವುದಾಗಿ ಘೋಷಿಸಿದ್ದಾರೆ. (ಅನುಬಂಧ 1.)
2. ಅವರ ಮೇಲಿರುವ ಆರೋಪಕ್ಕೆ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡಿ ಪ್ರಸ್ತಾಪಿಸಿರುವ R.T.C. Form No. 16 ಗಳಲ್ಲಿ ಒಂದು Form ನಲ್ಲಿರುವ 'ಎಲಿಜಿಬತ್' ತಮ್ಮ ಮಗಳೆಂದು ಸ್ವತಹ ಡಾ. ಎಚ್.ಟಿ. ಸಾಂಗ್ಲಿಯಾನರವರೇ ಹೇಳಿದ್ದಾರೆ.
3. ಪ್ರಸ್ತಾಪಿಸಿರುವ R.T.C. Formಗಳಲ್ಲಿ ಇರುವ ಹೆಸರಿನವರು ಉಚ್ಚ ನ್ಯಾಯಾಲಯದ ಮುಂದೆ ಪ್ರಸ್ತಾಪಿಸಿರುವ ಸರ್ವೇ ನಂ ಕುರಿತಂತೆ ಅನೇಕ ಮೊಕದ್ದಮೆಗಳನ್ನು ಹೂಡಿರುತ್ತಾರೆ (ಅನುಬಂಧ 2 ರಿಂದ 5)

ಈ ಮೇಲಿನ ಮಾಹಿತಿಗಳಿಂದ ಕೆಳಕಂಡ ಸ್ಪಷ್ಟ ಅಂಶಗಳು ದೃಢವಾಗುತ್ತವೆ:

1. 14/10/2014ರ ನನ್ನ ಪತ್ರದೊಂದಿಗೆ ಲಗತ್ತಿಸಿದ್ದ ಮೂರು R.T.C. Form No. 16 ಗಳು ಎಲಿಜಿಬತ್ , ಜಾನ್ ಆದಿಲ್ ಕಾಮತ್ ಪಿಂಟೊ ಮತ್ತು ಯೋನಾ ಪಿಂಟೊ ಹೆಸರಿನಲ್ಲಿರುತ್ತವೆ. ಈಗ ಇವುಗಳ ಜೊತೆಗೆ ಇನ್ನೊಂದು

R.T.C. Form No. 16 ನಲ್ಲಿರುವ ಹೆಸರು ರತಂಗಪೊಯಿ ಆಗಿದ್ದು, ಅವರು ಡಾ. ಎಚ್.ಟಿ. ಸಾಂಗ್ಲಿಯಾನರವರ ಧರ್ಮಪತ್ನಿ ಎಂದು ಧೃಢಪಟ್ಟಿದೆ. ಹಾಗಾಗಿ ಈಗ ಅವರ ಕುಟುಂಬಕ್ಕೆ ತಲಾ 2 ಎಕರೆಯಂತೆ ಮಂಜೂರಾಗಿರುವ ಭೂಮಿ 8 ಎಕರೆಗಲಾಗಿರುತ್ತದೆ.

2. ಎಲಿಜಿಬತ್' ತಮ್ಮ ಮಗಳೆಂದು ಸ್ವತಹ ಡಾ. ಎಚ್.ಟಿ. ಸಾಂಗ್ಲಿಯಾನರವರೇ ಹೇಳಿರುವುದರಿಂದ ಮಗಳ ಹೆಸರಿನಲ್ಲಿ ಭೂಮಿ ಮಂಜೂರಾಗಿರುವುದು ಧೃಢ**ಪಟ್ಟಿದೆ.**

3. **ಡಾ. ಎಚ್.ಟಿ. ಸಾಂಗ್ಲಿಯಾನರವರೇ ಸ್ವತಹ 2004ರಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿದಿರುವ ಆಸ್ತಿ ವಿವರಗಳಿರುವ ಪ್ರಮಾಣ ಪತ್ರದಿಂದ ( ಅಫಿದವಿಟ್) ಶ್ರೀಮತಿ ರತಂಗಪೊಯಿ ಅವರ ಧರ್ಮಪತ್ನಿ ಎಂದು ಮತ್ತು ಅವರ ಹೆಸರಿನಲ್ಲಿ** ಬೆಂಗಳೂರು ಉತ್ತರ(ಅಪರ) ತಾಲೂಕಿನ ಜಾಲ-2 ಹೋಬ್ಳಿಯ ಗಡೇನಹಳ್ಳಿ ಗ್ರಾಮದಲ್ಲಿ **2 ಎಕರೆ ಭೂಮಿಯಿರುವುದು** ಧೃಢಪಟ್ಟಿದೆ.

4. ಲಗತ್ತಿಸಿರುವ ಅನುಬಂದ – 2 ಲ್ಲಿ CCC Nos.820 & 885-886/2013 (CIVIL) ನಲ್ಲಿ ಎಲಿಜಿಬತ್, ಜಾನ್ ಆಡಿಲ್ ಕಾಮತ್ ಪಿಂಟೊ ಹಾಗೂ ರತಂಗಪೊಯಿಯವರುಗಳ ಜಿ.ಪಿ.ಎ ಹೋಲ್ಡರ್ ಒಬ್ಬರೇ ಆಗಿದ್ದು, ಶ್ರೀ ಆರ್. ಭರತ್ ರಾಜ್ ಎಂದಿರುತ್ತದೆ. **ಇದರಿಂದ ಈ ಮೂರು ಜನ ಸಂಬಂಧಿಗಳೆಂಬುದು ತಿಳಿಯುತ್ತದೆ.**

**5.** ಲಗತ್ತಿಸಿರುವ ಅನುಬಂದ - 3 ಲ್ಲಿ WRIT PETITION NO.74/2014 ನಿಂದ ಶ್ರೀಮತಿ ಯೂನೊ ಪಿಂಟೊ , ಜಾನ್ ಆಡಿಲ್ ಕಾಮತ್ ಪಿಂಟೊನ ತಾಯಿ ಎನ್ನುವುದು ತಿಳಿಯುತ್ತದೆ. ಇದರಲ್ಲಿ ಜಾನ್ ಆಡಿಲ್ ಕಾಮತ್ ಪಿಂಟೊನ ವಯಸ್ಸು 2014ರಲ್ಲಿ 42 ವರ್ಷಗಳು ಎಂದು ನಮೂದಿಸಲಾಗಿದೆ, **ಭೂಮಂಜೂರಾತಿ ಆದಾಗ 1979-1980ನಲ್ಲಿ ಅವರು ಅಪ್ರಾಪ್ತರಾಗಿದ್ದು ಅವರಿಗೆ 7 ವರ್ಷ ವಯಸ್ಸಾಗಿತ್ತು.**

**6.** ಲಗತ್ತಿಸಿರುವ (ಅನುಬಂದ 4 ) Civil Miscellaneous petition No. 184 of 2013 ಪ್ರಕಾರ ಶ್ರೀಮತಿ ಎಲಿಜಿಬತ್ ಗೆ 41 ವರ್ಷಗಳು ಎಂದು ನಮೂದಿಸಲಾಗಿದೆ. **ಭೂಮಂಜೂರಾತಿ ಆದಾಗ 1979-1980ನಲ್ಲಿ ಅವರು ಅಪ್ರಾಪ್ತರಾಗಿದ್ದು ಅವರಿಗೆ 6 ವರ್ಷ ವಯಸ್ಸಾಗಿತ್ತು.**

ಮೇಲಿನ ಮಾಹಿತಿಗಳಿಂದ ಬೆಂಗಳೂರು ಉತ್ತರ (ಅಪರ) ತಾಲೂಕಿನ ಜಾಲ-2 ಹೋಬ್ಳಿಯ ಗಡೇನಹಳ್ಳಿ ಗ್ರಾಮದ ಸರ್ವೇ ನಂ. 22 ರಲ್ಲಿ 8 ಎಕರೆ ಭೂಮಿಯು ನಿವೃತ್ತ ಪೊಲೀಸ್ ಅಧಿಕಾರಿ ಡಾ. ಎಚ್.ಟಿ. ಸಾಂಗ್ಲಿಯಾನ ಕುಟುಂಬದ್ದು ಎಂಬುದು ಧೃಢಪಟ್ಟಿದೆ. ಆದರೆ ಇವೆಲ್ಲಾ ದಾಖಲೆಗಳಲ್ಲೂ ಸಾಂಗ್ಲಿಯಾನರವರ ಹೆಸರನ್ನು ಗೌಪ್ಯವಾಗಿಡಲು ಪ್ರಯತ್ನಪಟ್ಟಿರುವುದು ಗೋಚರವಾಗುತ್ತದೆ. 2014ರ ಉಚ್ಚ ನ್ಯಾಯಾಲಯದ ಮೊಕದ್ದಮೆಗಳಲ್ಲೂ ರತಂಗಪೊಯಿಯವರು ಸಾಂಗ್ಲಿಯಾನರವರ ಧರ್ಮಪತ್ನಿ ಎನ್ನುವುದನ್ನು ಮುಚ್ಚಿಟ್ಟು ತಂದೆಯ ಹೆಸರನ್ನು ನಮೂದಿಸಲಾಗಿದೆ. ಸಾಂಗ್ಲಿಯಾನರವರ ಹೆಸರು ಎಲ್ಲೂ ಪ್ರಸ್ತಾಪವಾಗದಿರುವ ರೀತಿಯಲ್ಲಿ ನೋಡಿಕೊಂಡು ಉಚ್ಚ ನ್ಯಾಯಾಲಯಕ್ಕೂ ವಂಚನೆ ಮಾಡಿರುತ್ತಾರೆ (ಅನುಬಂಧಿ-5).

ಭೂಮಿ ಮಂಜೂರಾತಿಗೆ ಇರಬೇಕಾದ ಮಾನದಂಡಗಳು ಸ್ಪಷ್ಟವಾಗಿವೆ 1.ಮಂಜೂರಿದಾರರು ವ್ಯವಸಾಗಾರರಾಗಿರಬೇಕು 2. ಕೃಷಿಯೇತರ ವರಮಾನ ರೂ. 2 ಲಕ್ಷಕ್ಕಿಂತ ಹೆಚ್ಚಿಗೆ ಇರಬಾರದು. 3. ಮಹಾನಗರ ಪಾಲಿಕೆ ವ್ಯಾಪ್ತಿಯ 18 ಕಿಲೋಮೀಟರ್ ಒಳಗಡೆ ಇರಬಾರದು ಮತ್ತು 4 ಅಪ್ರಾಪ್ತ ವಯಸ್ಸಿನ ಮಕ್ಕಳಾಗಿರಬಾರದು. ಇದೆಲ್ಲವನ್ನೂ ಬದಿಗೊತ್ತಿ ಡಾ. ಎಚ್.ಟಿ. ಸಾಂಗ್ಲಿಯಾನರವರ ಕುಟುಂಬದವರಿಗೆ ಕೃಷಿ ಭೂಮಿ ಮಂಜೂರಾಗಿದ್ದು ಹೇಗೆ?

ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಎಂದೇ ಹೆಸರುವಾಸಿಯಾಗಿದ್ದ ಸಾಂಗ್ಲಿಯಾನರವರು ಸರ್ಕಾರಿ ಸೇವೆಯಲ್ಲಿದ್ದಾಗಲೇ ಈ ರೀತಿಯ ಕ್ರಿಮಿನಲ್ ಕೃತ್ಯದಲ್ಲಿ ಭಾಗಿಯಾಗಿರುವುದು ಅತ್ಯಂತ ನೋವಿನ ವಿಷಯವಾಗಿದೆ. ಕಾನೂನು ಉಲ್ಲಂಘಿಸಿದವರನ್ನು ಹಿಡಿದು ಶಿಕ್ಷೆ ವಿಧಿಸಬೇಕಾದವರೇ ಕಾನೂನುಗಳನ್ನು ಗಾಳಿಗೆ ತೂರಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು, ಉಚ್ಚ ನ್ಯಾಯಾಲಯವನ್ನೂ ಪದೇ ಪದೇ ವಂಚಿಸಿ ಭೂಕಬಳಿಕೆಯಲ್ಲಿ ಭಾಗಿಯಾಗಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಲಗತ್ತಿಸಿರುವ ಎಲ್ಲಾ ಅನುಬಂಧಗಳನ್ನು ಪರಿಶೀಲಿಸಿದರೆ ಸಾಂಗ್ಲಿಯಾನ ಕುಟುಂಬ ಸದಸ್ಯರು ಉಚ್ಚ ನ್ಯಾಯಾಲಯದ ಮುಂದೆ ಇನ್ನೂ ಅನೇಕ ಸುಳ್ಳು ಮಾಹಿತಿಗಳನ್ನು ಕೊಟ್ಟಿರುವುದು ಗೋಚರವಾಗುತ್ತದೆ.

ದಿ. 18/10/2014ರಂದು ಸಂಜೆ ಸುಮಾರು 6.46ಕ್ಕೆ ಡಾ. ಎಚ್.ಟಿ. ಸಾಂಗ್ಲಿಯಾನರವರೇ ದೂರವಾಣಿ ನನಗೆ ಕರೆಮಾಡಿ ಮಂಜೂರಾತಿಯನ್ನು ಸಾಬೀತುಪಡಿಸುವಂತೆ ಸವಾಲಿನ ರೀತಿಯಲ್ಲಿ ಪೊಲೀಸ್ ಧಿಮಾಕಿನಲ್ಲಿ ಮಾತನಾಡಿರುತ್ತಾರೆ. ನಾನು ಆ ಸಂದರ್ಭದಲ್ಲಿ, ತಾವೇ 2004ರಲ್ಲಿ ಚುನಾವಣಾ ಅಧಿಕಾರಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಗಡೇನಹಳ್ಳಿ ಗ್ರಾಮದಲ್ಲಿ ತಮ್ಮ ಪತ್ನಿಯ ಹೆಸರಿನಲ್ಲಿ 2 ಎಕರೆ ಭೂಮಿ ಇರುವುದಾಗಿ ಘೋಷಿಸಿಲ್ಲವೇ? ಇದಕ್ಕಿಂತ ಮತ್ತಾವ ಪುರಾವೆ ಬೇಕು ಎಂದು ಕೇಳಿದ್ದಕ್ಕೆ ನಾನು ಅಮಾಯಕ, ಆಗ ನನಗೆ ಗೊತ್ತಾಗಲಿಲ್ಲ ಎಂದು ಹೇಳಿರುವುದು ಹಾಸ್ಯಾಸ್ಪದವಾಗಿರುತ್ತದೆ. ಅವರದೇ ಪ್ರಮಾಣ ಪತ್ರ ಇರುವಾಗ ಮತ್ತಾವ ಪುರಾವೆ ಬೇಕು? ಇಂತಹ ಪ್ರಶ್ನಾತೀತ ಪುರಾವೆ ಇದ್ದಾಗ್ಯೂ ಅವರಿಗೆ ರಕ್ಷಣೆ ದೊರಕುತ್ತಿರುವುದು ನನಗೆ ಅಚ್ಚರಿ ಉಂಟುಮಾಡಿದೆ. ಆ ಪ್ರದೇಶದ ಭೂಮಿ ಕಬಳಿಸಿರುವವರಲ್ಲಿ ಇನ್ನೂ ಅನೇಕ ಅಧಿಕಾರಿಗಳು ಮತ್ತು ಇತರೇ ಪ್ರಭಾವಿ ವ್ಯಕ್ತಿಗಳೂ ಇರಬಹುದೆಂಬ ಬಲವಾದ ಶಂಕೆ ಮೂಡುತ್ತದೆ.

ಹಿಂದಿನ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ಮತ್ತು ಈ ಪತ್ರದ ಮೇಲ್ಕಂಡ ಅಂಶಗಳಿಂದ ವಿವರಿಸಿರುವಂತೆ ಸದರಿ ಕುಟುಂಬದವರು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿರುವುದು ದೃಢಪಟ್ಟಿದೆ. ಆದರೂ ಡಾ. ಎಚ್.ಟಿ. ಸಾಂಗ್ಲಿಯಾನರವರು ಆ ತರಹದ ಭೂಕಬಳಿಕೆ ಮಾಡೇ ಇಲ್ಲ ಎಂದು ಸಾರ್ವಜನಿಕವಾಗಿ ಸವಾಲು ಹಾಕುವ ಮಟ್ಟಕ್ಕೆ ಹೋಗಿರುವುದು ತಾವೂ ಗಮನಿಸಿರಬಹುದು. ಪೊಲೀಸ್ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದವರು ಇಷ್ಟೆಲ್ಲಾ ಆಧಾರಗಳಿದ್ದರೂ ತಾನು ಮತ್ತು ತನ್ನ ಕುಟುಂಬ ಸದಸ್ಯರು ಏನೂ ಮಾಡಿಲ್ಲವೆಂದು ಸಾರ್ವಜನಿಕವಾಗಿ ಸವಾಲು ಹಾಕುವುದು ಉದ್ಧಟತನದ ಮಾತುಗಳಾಗಿರಿತ್ತವೆ. ಸರ್ಕಾರ ಮತ್ತು ಸಾರ್ವಜನಿಕರನ್ನು ಮತ್ತೆ ಮತ್ತೆ ಮೋಸಗೊಳಿಸುವ ಷಡ್ಯಂತ್ರವಾಗಿರುತ್ತದೆ. ಪದೇ ಪದೇ ಸುಳ್ಳು ಹೇಳುವುದರಿಂದ ಸತ್ಯವನ್ನು ಮುಚ್ಚಿಡಲಾಗುವುದಿಲ್ಲ.ಇಂಥವರ ಪ್ರಾಮಾಣಿಕತೆಯ ಸೋಗಿನ ಮುಖವಾಡ

ಕಳಚಿ ಇವರ ಗೋಸುಂಬೆ ಬಣ್ಣವನ್ನು ಬಯಲುಮಾಡಲು ಸತ್ಯವನ್ನು ಎತ್ತಿ ಹಿಡಿಯಬೇಕಾದ ಗುರುತರವಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಇಂತಹ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳದಿದ್ದರೆ ಆಡಳಿತವು ತನ್ನ ಜವಾಬ್ದಾರಿಯಿಂದ ನುಣುಚಿಕೊಂಡತ್ತಾಗುತ್ತದೆ.

ಆದುದರಿಂದ ಈ ಭೂಕಬಳಿಕೆಯ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಶೀಘ್ರ ಗತಿಯಲ್ಲಿ ನಿಗದಿತ ಅವಧಿಯೊಳಗೆ ತನಿಖೆ ನಡೆಸಿ ಎಲ್ಲಾ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ.

ಎಲ್ಲಾ ಅನುಬಂಧಗಳ ಪ್ರತಿಯನ್ನು <u>**http://savekarnataka.in**</u> **website** ನಲ್ಲಿ ಹಾಕಲಾಗಿದೆ. ಮುಖ್ಯಮಂತ್ರಿಗಳ ಕಚೇರಿಯ ಮುದ್ರೆಯೊಂದಿಗೆ ಸ್ವೀಕೃತಿ ಸಹಿ ಪಡೆದನಂತರ ಈ ಪತ್ರವನ್ನೂ ಅದೇ **website** ನಲ್ಲಿ ಹಾಕಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ.ಟಿ. ರಾಮಸ್ವಾಮಿ) 21/10/2014

ಯಥಾ ನಕಲನ್ನು ಸನ್ಮಾನ್ಯ ಶ್ರೀ ಶ್ರೀನಿವಾಸ ಪ್ರಸಾದ್ ರವರು, ಕಂದಾಯ ಸಚಿವರು, ವಿಧಾನ ಸೌಧ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮ ಕೈಗೊಳ್ಳಲು ಕೋರಿ ಕಳುಹಿಸಿದೆ

## Anti Land-Grabbing Action Committee
## ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

No. 759, 5th Main, 8th Cross, R.T.Nagar, II Block, Bangalore 560032 Ph: 094481 20305

21/10/2014

ಇಂದ,
ಶ್ರೀ ಎ.ಟಿ.ರಾಮಸ್ವಾಮಿ, ಬೆಂಗಳೂರು.

ಗೆ,
ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು,
ಗೌರವಾನ್ವಿತ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಉಲ್ಲೇಖ: 14/10/2014ರಂದು ಇದೇ ವಿಷಯದ ಬಗ್ಗೆ ನಾನು ತಮಗೆ ಬರೆದ ಪತ್ರ.

ಸನ್ಮಾನ್ಯರೇ,

ಉಲ್ಲೇಖಿತ ಪತ್ರದೊಂದಿಗೆ ಲಗತ್ತಿಸಿದ್ದ ಮೂರು R.T.C. Form No. 16ಗಳು ಒಂದೇ ಕುಟುಂಬಕ್ಕೆ ಸೇರಿರುವುದಾಗಿ ತಿಳಿಸಲಾಗಿತ್ತು. ಈಗ ಅದು ನಿವೃತ್ತ ಪೊಲೀಸ್ ಅಧಿಕಾರಿ ಡಾ. ಎಚ್.ಟಿ. ಸಾಂಗ್ಲಿಯಾನ ಕುಟುಂಬದ್ದು ಎಂದು ದಾಖಲೆಗಳಿಂದ ತಿಳಿದುಬಂದಿದೆ. ಈ ಕುರಿತಂತೆ ಸಾರ್ವಜನಿಕ ತಾಣಗಳಲ್ಲಿ (public domain) ಲಭ್ಯವಿರುವ ಮಾಹಿತಿಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

1. ಡಾ. ಎಚ್.ಟಿ. ಸಾಂಗ್ಲಿಯಾನರವರೇ ಸ್ವತಃ 2004ರಲ್ಲಿ ಚುನಾವಣಾ ಅಧಿಕಾರಿಗೆ ಸಲ್ಲಿಸಿರುವ ಆಸ್ತಿ ವಿವರಗಳಿರುವ ಪ್ರಮಾಣ ಪತ್ರದಲ್ಲಿ (affidavit) ತಮ್ಮ ಧರ್ಮಪತ್ನಿ ಶ್ರೀಮತಿ ರತಂಗಪೊಯಿಯವರ ಹೆಸರಿನಲ್ಲಿ ಬೆಂಗಳೂರು ಉತ್ತರ(ಅಪರ) ತಾಲೂಕಿನ ಜಾಲ-2 ಹೋಬ್ಳಿಯ ಗಡೇನಹಳ್ಳಿ ಗ್ರಾಮದಲ್ಲಿ 2 ಎಕರೆ ಭೂಮಿ ಇರುವುದಾಗಿ ಘೋಷಿಸಿದ್ದಾರೆ. (ಅನುಬಂಧ 1.)
2. ಅವರ ಮೇಲಿರುವ ಆರೋಪಕ್ಕೆ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡಿ ಪ್ರಸ್ತಾಪಿಸಿರುವ R.T.C. Form No. 16 ಗಳಲ್ಲಿ ಒಂದು Form ನಲ್ಲಿರುವ 'ಎಲಿಜಬತ್' ತಮ್ಮ ಮಗಳೆಂದು ಸ್ವತಹ ಡಾ. ಎಚ್.ಟಿ. ಸಾಂಗ್ಲಿಯಾನರವರೇ ಹೇಳಿದ್ದಾರೆ.
3. ಪ್ರಸ್ತಾಪಿಸಿರುವ R.T.C. Formಗಳಲ್ಲಿ ಇರುವ ಹೆಸರಿನವರು ಉಚ್ಚ ನ್ಯಾಯಾಲಯದ ಮುಂದೆ ಪ್ರಸ್ತಾಪಿಸಿರುವ ಸರ್ವೇ ನಂ ಕುರಿತಂತೆ ಅನೇಕ ಮೊಕದ್ದಮೆಗಳನ್ನು ಹೂಡಿರುತ್ತಾರ (ಅನುಬಂಧ 2 ರಿಂದ 5)

ಈ ಮೇಲಿನ ಮಾಹಿತಿಗಳಿಂದ ಕೆಳಕಂಡ ಸ್ಪಷ್ಟ ಅಂಶಗಳು ದೃಢವಾಗುತ್ತವೆ:

1. 14/10/2014ರ ನನ್ನ ಪತ್ರದೊಂದಿಗೆ ಲಗತ್ತಿಸಿದ್ದ ಮೂರು R.T.C. Form No. 16 ಗಳು ಎಲಿಜಬತ್, ಜಾನ್ ಆಡಿಲ್ ಕಾಮತ್ ಪಿಂಟೊ ಮತ್ತು ಯೋನಾ ಪಿಂಟೊ ಹೆಸರಿನಲ್ಲಿರುತ್ತವೆ. ಈಗ ಇವುಗಳ ಜೊತೆಗೆ ಇನ್ನೊಂದು

21/10/14